

ನಾನು ಕೊಂಚ ಬೆಪ್ಪನೇ ಹೌದು. ಬೇರೆಯವರು ನೋಡಿ ಸರ್ರಕ್ಕನೆ ಗುರುತಿಸುವಷ್ಟು ವೇಗವಾಗಿ ನಾನು ಗಮನಿಸುವುದಿಲ್ಲ. ಒಮ್ಮೆ ಹತ್ತಿರದಲ್ಲೇ ಮಲಗಿದ್ದ ಚಿರತೆಯನ್ನು ಪತ್ತೆಹಚ್ಚಲು ನಾನು ವಿಫಲನಾಗಿದ್ದೆ. ಅದೊಮ್ಮೆ ತನ್ನ ಬಾಲವನ್ನು ಎತ್ತಿ ಅಲ್ಲಾಡಿಸಿ 'ನೋಡೋ ಮಂಗಾ ನಾನಿಲ್ಲಿದ್ದೇನೆ' ಎಂದು ಖಾತ್ರಿಪಡಿಸಿದ ಮೇಲೆ ಚಿರತೆ ನನ್ನರಿವಿಗೆ ಬಂದಿದ್ದು. ಪ್ರಾಯಶಃ 'ಅಗೋ ಹುಲಿ', 'ಓಹೋ ಇಲ್ಲಿ ಚಿರತೆ' ಎಂದು ಯಾರಾದರೂ ಕೂಗಿದ ತಕ್ಷಣ ನಾನು ಗಾಬರಿಗೊಳ್ಳುವುದೇ ಈ ಗೊಂದಲಗಳಿಗೆ ಕಾರಣ ಇರಬಹುದು.

ಈ ವಿಷಯದಲ್ಲಿ ನನ್ನ ಗೆಳೆಯರಾದ ಶ್ರೀಕಾಂತ್, ಶಶಿಸಿಂಗ್ ಹಾಗೂ ವಿನಯ್ ತುಂಬಾ ಅದೃಷ್ಟಶಾಲಿಗಳು. ಅವರ ನಯನಗಳು ಪಕ್ಕಾ ಪೊಲೀಸ್ ಸಿ.ಐ.ಡಿ ಅಧಿಕಾರಿಗಳಂತೆ. ತಕ್ಷಣ ಯಾವುದು ಎಲ್ಲಿದ್ದರೂ ಜಾಲಾಡಿ ಕಂಡು ಹಿಡಿದು ಹಾಕಬಲ್ಲವು. ಇದು ನೋಟದ ಕಥೆಯಾಯಿತು.

ಮುಂದಿನದು ಕಾಡಿನೊಳಗಿನ ಶಬ್ದಗಳ ಸರದಿ. ಅಚ್ಚರಿ ಎಂದರೆ ಕಾಡಿನ ಒಂದು ಸಣ್ಣ ಸಪ್ಪಳಕ್ಕೂ ವಿಶೇಷ ಅರ್ಥವಿರುರುತ್ತದೆ. ಸನಿಹದಲ್ಲೇ ಇರಬಹುದಾದ ಹುಲಿ ಮತ್ತು ಚಿರತೆಗಳ ಇರುವಿಕೆ ಗೊತ್ತಾಗುವುದೇ ನಮಗೆ ಈ ರಹಸ್ಯ ಶಬ್ದದಿಂದ. ಜಿಂಕೆ, ಕಡವೆ, ಕಾಡುಕುರಿ ಮತ್ತು ವಿಶೇಷವಾಗಿ ಮುಸಿಯಗಳು ಹುಲಿ, ಚಿರತೆ, ಹಾಗೂ ಕಾಡುನಾಯಿಗಳ ಆಗಮನವನ್ನು ಇಡೀ ವನಕ್ಕೆ ಸಾರಿ ಸಾರಿ ಹೇಳುತ್ತವೆ. ಗಾಳಿಯ ವಾಸನೆಯಲ್ಲಿಯೇ ಶತ್ರುವಿನ ಬರುವಿಕೆಯ ಸುಳಿವು ಪಡೆಯುವ ಜಿಂಕೆಗಳು ಕಾಲನ್ನು ನೆಲಕ್ಕೆ ಕುಟ್ಟಿ ಕುಟ್ಟಿ ಕೂಗುತ್ತಾ, ಬಾಲವನ್ನು ಮೇಲೆತ್ತಿಕೊಂಡು ಚಡಪಡಿಸುತ್ತವೆ. ತಮ್ಮನ್ನು ಹಿಡಿಯಲು ಬರುತ್ತಿರುವ ಆಗಂತುಕನ ಆಗಮನವನ್ನು